ಅಸಲು ದಾವಾ ನಂ.184/2017
ಡಿ.ಡಬ್ಲು -1

ದಿನಾಂಕಃ 14-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀಸವಾಲುಃ- ವಾದಿ ಪರ ಶ್ರೀ.ಎಸ್ ಎಸ್ ಪಿ ವಕೀಲರಿಂದ.**

ವಾದಿಯು ಯಾವ ಯಾವ ಕಾಗದ ಪತ್ರಗಳನ್ನು ಹಾಜರುಪಡಿಸಿರುತ್ತಾರೆ ಎಂದು ನಮ್ಮ ನ್ಯಾಯವಾದಿಗಳ ಮೂಲಕ ಕೇಳಿ ತಿಳಿದುಕೊಂಡಿರುತ್ತೇನೆ. ನಿಪಿ-20 ವಾದಿಯ ಚುನಾವಣಾ ಗುರುತಿನ ಚೀಟಿ ಎಂದರೆ ಇರಬಹುದು. ನಿಪಿ-1 ವಾದಿಯ ಆಧಾರ ಕಾರ್ಡ ಎಂದರೆ ಸರಿ. ನಿಪಿ-22 ವಾದಿಯ ಪಾನ್ ಕಾರ್ಡ ಎಂದರೆ ಇರಬಹುದು. ನಿಪಿ-23 ವಾದಿಯ ಬ್ಯಾಂಕ್ ಪಾಸ್ ಬುಕ್ ಎಂದರೆ ನನಗೆ ಗೊತ್ತಿಲ್ಲ. ನಿಪಿ-24 ನನ್ನ ಸಹೋದರ ವಿಜಯಕುಮಾರ ಇವರ ಆಧಾರ ಕಾರ್ಡ ಎಂದರೆ ಸರಿ. ಅದು ವಾದಿಯ ಸ್ವಾಧೀನದಲ್ಲಿ ಇತ್ತು ಎಂದರೆ ಗೊತ್ತಿಲ್ಲ. ಅದು ವಾದಿಯು ವಿಜಯಕುಮಾರ ಇವರನ್ನು ಮದುವೆಯಾಗಿದ್ದರಿಂದ ಅವರ ಬಳಿ ಇತ್ತು ಎಂದರೆ ಸರಿಯಲ್ಲ. ನಿಪಿ-24 ಮೂಲ ಆಧಾರ ಕಾರ್ಡ ನಮ್ಮ ಮನೆಯಲ್ಲಿ ಇರುತ್ತದೆ ಅದನ್ನು ಅವಶ್ಯ ಬಿದ್ದಲ್ಲಿ ಹಾಜರುಪಡಿಸುತ್ತೇನೆ. ಹಾಗೇ ಮೂಲ ಆಧಾರ ಕಾರ್ಡ ನಮ್ಮ ಮನೆಯಲ್ಲಿ ಇಲ್ಲದೇ ಇದ್ದರೂ ಸಹ ಇರುವುದಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-25 ಮತ್ತು 26 ರಲ್ಲಿ ನನ್ನ ಸಹೋದರ ಕಾಣಿಸುತ್ತಾರೆ ಎಂದರೆ ಸರಿ. ನಿಪಿ-26 ನನ್ನ ಸಹೋದರ ವಾದಿಗೆ ತಾಳಿ ಕಟ್ಟಿದ ಪೋಟೋ ಎಂದರೆ ಸರಿಯಲ್ಲ. ನಿಪಿ-29 ರಲ್ಲಿ ನಾನು, ನನ್ನ ಹೆಂಡತಿ, ತಂದೆ ತಾಯಿ, ಸಹೋದರ ಕಾಣಿಸುತ್ತೇವೆ, ಆದರೆ ವಾದಿಯ ಪೊಟೋ ಅದು ಇರುವುದಿಲ್ಲ. ವಾದಿಯ ವಿವಾಹವು ನನ್ನ ಸಹೋದರನೊಂದಿಗೆ ಆಗಿದ್ದರೂ ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಹೋದರ ತೀರಿಕೊಂಡ ನಂತರ ನಿಪಿ-18 ರಂತೆ ವಾರಸು ಪ್ರಮಾಣಪತ್ರ ತಹಶೀಲ್ದಾರ ಸಾಹೇಬರು ಕೊಟ್ಟಿರುತ್ತಾರೆ ಎಂದರೆ ಸರಿ. ನಿಪಿ-18 ರಂತೆ ವಾದಿಯ ಹೆಸರು ನನ್ನ ಸಹೋದರನ ವಾರಸುದಾರರು ಎಂದು ಹೇಳಲಾಗಿರುತ್ತದೆ ಎಂದರೆ ಸರಿ. ಸಾಕ್ಷಿ ವಾದಿಯೇ ತನ್ನ ಹೆಸರನ್ನು ಹಚ್ಚಿಕೊಂಡಿರುವುದಾಗಿ ನುಡಿಯುತ್ತಾರೆ. ನಿಪಿ-18 ನ್ನು ರದ್ದುಪಡಿಸಲು ಯಾವುದೇ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿಲ್ಲ. ವಿಜಯ ಕುಮಾರ ಇವರು ತಮ್ಮ ಜೀವಿತ ಅವಧಿಯಲ್ಲಿ ವಾದಿಯ ಹೆಸರಿನಲ್ಲಿ ಜೀವ ವಿಮೆ ಮಾಡಿಸಿದ್ದರು ಎಂದರೆ ಗೊತ್ತಿಲ್ಲ. ನಿಪಿ-17 ವಿಜಯಕುಮಾರ

ಇವರ ಮರಣ ಪ್ರಮಾಣ ಪತ್ರ ಎಂದರೆ ಸರಿ. ನಿಪಿ–17 ಪಡೆಯಲು ನಾವು ಅರ್ಜಿ ಸಲ್ಲಿಸಿರಲಿಲ್ಲ. ನಿಪಿ–17 ಏಕೆ ಪಡೆಯಲಿಲ್ಲ ಎಂದರೆ ನಮ್ಮ ತಂದೆಯವರಿಗೆ ಆರೋಗ್ಯ ಸರಿ ಇರಲಿಲ್ಲ, ಅವರನ್ನು ಆಸ್ಪತ್ರೆಗೆ ನಾನೇ ತೆಗೆದುಕೊಂಡು ಹೋಗುತ್ತಿದ್ದು ಇತ್ತು. ಹಾಗೇ ಆಸ್ಪತ್ರೆಗೆ ತೋರಿಸುವ ಕುರಿತು ದಾಖಲೆಗಳು ಮನೆಯಲ್ಲಿ ಇರುತ್ತವೆ. ನಿಪಿ–17 ರಲ್ಲಿ ತಾಯಿಯ ಹೆಸರು, ತಂದೆಯ ಹೆಸರು ಹಾಗೂ ಮರಣವಾದ ಸ್ಥಳ ಸರಿಯಾಗಿ ನಮೂದು ಆಗಿರುತ್ತದೆ. ವಿಜಯಕುಮಾರ ಇವರ ಹೆಂಡತಿಯ ಹೆಸರು ಲತಾ ಎಂದು ನಮೂದು ಇರುತ್ತದೆ ಎಂದರೆ ಸರಿ. ಸಾಕ್ಷಿ ಅದನ್ನು ವಾದಿ ಸೇರಿಸಿಕೊಂಡಿರುವುದಾಗಿ ನುಡಿಯುತ್ತಾರೆ. ನಿಪಿ–17 ರದ್ದುಪಡಿಸಲು ದಾವೆ ಸಲ್ಲಿಸಿಲ್ಲ. ನನ್ನ ಸಹೋದರ ವಿಜಯಕುಮಾರ ಇವರು ವಾದಿ ಇವರನ್ನು ವಿವಾಹವಾದ ಬಗ್ಗೆ ಫೋಟೋಗಳು ಹಾಗೂ ಅವರು ವಿಜಯಕುಮಾರ ಇವರ ಹೆಂಡತಿ ಅಂತಾ ತೋರೀಸಲು ಸಾಕಷ್ಟು ಕಾಗದ ಪತ್ರಗಳು ಇದ್ದರೂ ಸಹ ನಾನು ಬೇಕು ಅಂತಲೇ ವಾದಿ ವಿಜಯಕುಮಾರ ಇವರ ಹೆಂಡತಿ ಅಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಿಪಿ–35 ರಂತೆ ದಾವಾ ಆಸ್ತಿ ಸರ್ವೇ ನಂ.66 ಕ್ಷೇತ್ರ 15 ಎಕರೆ 07 ಗುಂಟೆ, 68/2 ಕ್ಷೇತ್ರ 05 ಎಕರೆ 16 ಗುಂಟೆ ಹಾಗೂ 69/2 ಕ್ಷೇತ್ರ 06 ಎಕರೆ 10 ಗುಂಟೆ ಇವು ದುರಸ್ತಿ ವಾಟ್ನಿಯಂತೆ ನಮ್ಮ ತಂದೆಯವರ ಪಾಲಿಗೆ ಬಂದಿರುತ್ತವೆ ಎಂದರೆ ಸರಿ. ಸದರಿ ಜಮೀನುಗಳು ಪಿತ್ರಾರ್ಜಿತ ಆಸ್ತಿ ಆಗಿದ್ದವು ಎಂದರೆ ಸರಿಯಲ್ಲ. ಸದರಿ ಜಮೀನುಗಳನ್ನು ನನ್ನ ತಂದೆ ದೇಸಾಯಿ ಇವರಿಂದ ಖರೀದಿ ಹಿಡಿದಿದ್ದರು. ಹಾಗೇ ಖರೀದಿ ಹಿಡಿದ ಬಗ್ಗೆ ಖರೀದಿ ಪತ್ರ ಹಾಜರುಪಡಿಸಿರಬಹುದು. ಹಾಗೇ ಯಾವುದೇ ಕಾಗದ ಪತ್ರ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂ.66 ರ ಜಮೀನನ್ನು ದಿನಾಂಕ 26–03–2015 ರಂದು ಪ್ರತಿವಾದಿ ನಂ.20 ಮತ್ತು 21 ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಜಮೀನು ಪಿತ್ರಾರ್ಜಿತ ಆಸ್ತಿ ಆಗಿರುವುದರಿಂದ ನನ್ನ ತಂದೆಗೆ ಅದನ್ನು ಮಾರಾಟ ಮಾಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಕೃಷಿಕರು ಎಂದರೆ ಸರಿ. ಸಾಕ್ಷಿ ಕೃಷಿಯ ಜೊತೆಗೆ ಗೊಬ್ಬರದ ಅಂಗಡಿ ಇಟ್ಟುಕೊಂಡಿದ್ದರು ಎಂದು ನುಡಿಯುತ್ತಾರೆ. ಗೊಬ್ಬರ ಅಂಗಡಿಯ ಲೈಸನ್ಸ ಹಾಜರುಪಡಿಸಿಲ್ಲ. ನಮ್ಮ ತಂದೆಗೆ ಇದ್ದ ಬೇರೆ ಜಮೀನುಗಳ ಆದಾಯದಿಂದ ಬಂದ ಹಣದಿಂದ ಸರ್ವೇ ನಂ.144/2 ರ ಜಮೀನು ಖರೀದಿ

ಅಸಲು ದಾವಾ ನಂ.184/2017

ಡಿ.ಡಬ್ಲು –1

ಹಿಡಿದಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಸರ್ವೇ ನಂ.66 ರ ಜಮೀನನ್ನು ಮಾರಾಟ ಮಾಡಿ ಖರೀದಿ ಹಿಡಿದಿರುತ್ತಾರೆ. ಸರ್ವೇ ನಂ.144/2 ನೇದ್ದನ್ನು 2014 ರಲ್ಲಿ ಖರೀದಿ ಹಿಡಿದಿರುತ್ತಾರೆ. ಹಾಗೇ 2014 ರಲ್ಲಿ ಖರೀದಿ ಹಿಡಿದ ಬಗ್ಗೆ ಕಾಗದ ಪತ್ರ ಹಾಜರುಪಡಿಸಿರಬಹುದು. ಸರ್ವೇ ನಂ.144/2 ರ ಆಸ್ತಿ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ದಾವಾದ ಜಮೀನುಗಳು ಒಟ್ಟು ಕುಟುಂಬದ ಆಸ್ತಿ ಇದ್ದರೂ ಸಹ ಅವು ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂ.407 ಹಾಗೂ 410/ಎ/ಎ2 ಇವು ಕುಂದಗೋಳ ತಾಲೂಕಿನ ಹದ್ದಿಯಲ್ಲಿ ಇರುತ್ತವೆ ಎಂದರೆ ಸರಿ. ಇವುಗಳನ್ನು ಹೊರತುಪಡಿಸಿ ಕುಂದಗೋಳ ಹದ್ದಿನಲ್ಲಿ ಬೇರೆ ಆಸ್ತಿಗಳು ಇಲ್ಲ ಎಂದರೆ ಸರಿ. ಸದರಿ ಆಸ್ತಿಗಳನ್ನು ಈ ದಾವೆ ಚಾಲ್ತಿಯಲ್ಲಿ ಇರುವಾಗ ದಾನ ಪತ್ರ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸರ್ವೇ ನಂ.68/2 ಹಾಗೂ 69/2 ರ ಜಮೀನು ಕುರಿತು ಈ ದಾವೆ ಚಾಲ್ತಿಯಲ್ಲಿ ಇರುವಾಗ ಮೃತ್ಯುಪತ್ರ ಮಾಡಿಕೊಂಡಿರುತ್ತೇವೆ ಎಂದರೆ ಸರಿ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.